ಅಪ್ಪ ರಾಜಣ್ಣ ಒಂದು ದಿನ ಮಗನೆದುರು 'ಊರಲ್ಲಿ ಹೈಸ್ಕೂಲು ಶುರುವಾಗಿ ಅರವತ್ತು ವರ್ಷಗಳಾದ್ವು... ಜನ ಮರೆತಿದ್ದಾರೆ. ಅದರ ನೆನಪಿಗೆ ಒಂದು ಸಭೆಯನ್ನಾದರೂ ಮಾಡುವಂತೆ ಚೇರ್ಮನ್ನರಿಗೆ ನೀನಾದರೂ ಹೇಳಯ್ಯ' ಎಂದು ಹಲವು ಸಲ ಅಂಗಲಾಚಿದ ಮೇಲೆ ಪುರುಷೋತ್ತಮ ಅಪ್ಪನ ಆಸೆಯನ್ನು ಪಂಚಾಯ್ತಿ ಚೇರ್ಮನ್ನರ ಕಿವಿಗೆ ಹಾಕಿದ್ದ. ರಾಜಣ್ಣನ ಸಲಹೆ ಚೇರ್ಮನ್ನರಿಗೆ ಇಷ್ಟವಾಯಿತು. ಅದನ್ನು ಅವರು ಪಂಚಾಯ್ತಿ ಮೆಂಬರುಗಳಿಗೂ ಹೇಳಿದರು. ಹೈಸ್ಕೂಲು ಫಂಕ್ಷನ್ನಿನ ನೆಪದಲ್ಲಿ ಯಾರಾದರೂ ಮಂತ್ರಿಗಳನ್ನು ಕರೆಸಿ ಊರಿನ ಸಮಸ್ಯೆಗಳನ್ನು ಅವರಿಗೆ ಹೇಳಿಕೊಂಡರೆ ಕೆಲವನ್ನಾದರೂ ಬಗೆಹರಿಸಿಕೊಳ್ಳಲು ಸಾಧ್ಯವಾದೀತು ಎಂಬ ಆಸೆ ಅವರಲ್ಲಿ ಮೊಳೆಯಿತು. ಹೊಸಳ್ಳಿಯ ಹುಲುಮಾನವರಿಗೂ ರಾಜಣ್ಣನ ಸಲಹೆ ಇಷ್ಟವಾಯಿತು.

ಊರಿಗೂ ತಮಗೂ ಯಾವುದೇ ಸಂಬಂಧವೇ ಇಲ್ಲ ಎನ್ನುವಂತಿದ್ದ ಕೆಲವರು ಹೈಸ್ಕೂಲು ಸರ್ಕಾರಕ್ಕೆ ಸೇರಿದ್ದು. ಅದರ ಮೇಲೆ ನಮಗೇನು ಹಕ್ಕಿದೆ? ವಜ್ರ ಮಹೋತ್ಸವ ಮಾಡಲು ದುಡ್ಡು ಎಲ್ಲಿಂದ ತರ್ತೀರಿ? ಇತ್ಯಾದಿ ಅಡ್ಡ ಪ್ರಶ್ನೆಗಳನ್ನು ಹಾಕಿದರು. ಸ್ಕೂಲು ಕಟ್ಟಿದ್ದು ನಮ್ಮ ಊರ ಹಿರಿಯರು. ಅದಕ್ಕೆ ಊರ ಜನರೆಲ್ಲ ದುಡ್ಡು ಕೊಟ್ಟಿದಾರೆ, ಈಗ ಸ್ಕೂಲು ಸರ್ಕಾರಕ್ಕೆ ಸೇರಿದ್ದರೂ ಅದರ ಮೇಲೆ ನಮಗೆ ಹಕ್ಕಿದೆ ಎಂದು ಪುರುಷೋತ್ತಮ ವಾದಿಸಿದ. ಹಲವಾರು ದಿನ ವಜ್ರ ಮಹೋತ್ಸವ ಮಾಡಬೇಕೊ ಬೇಡವೊ ಎಂಬ ಬಗ್ಗೆ ಚರ್ಚೆ ನಡೆಯಿತು. ಕೊನೆಗೆ ಆಚರಣೆ ಮಾಡಿಯೇ ಬಿಡೋಣವೆಂದು ಊರ ಸಮಸ್ತರು ನಿರ್ಧರಿಸಿದರು!

ವಜ್ರ ಮಹೋತ್ಸವದ ಆಚರಣೆಗಾಗಿ ಒಂದು ಸ್ವಾಗತ ಸಮಿತಿಯನ್ನು ಕ್ಷೇತ್ರದ ಶಾಸಕರ ಅಧ್ಯಕ್ಷತೆಯಲ್ಲೂ, ಹಲವು ಉಪ ಸಮಿತಿಗಳನ್ನು ಪಂಚಾಯ್ತಿ ಚೇರ್ಮನ್ನರ ಅಧ್ಯಕ್ಷತೆಯಲ್ಲೂ ರಚಿಸಿಕೊಂಡರು. ಎಲ್ಲ ಸಮಿತಿಗಳಿಗೂ ಪುರುಷೋತ್ತಮನೇ ಸಂಚಾಲಕ. ಹೀಗಾಗಿ ಅವನದೇ ಓಡಾಟ, ಪತ್ರ ವ್ಯವಹಾರ. ಅವನು ಮಾಡಿದ ಮೊದಲ ಕೆಲಸವೆಂದರೆ ಹೈಸ್ಕೂಲಿನ ಹಳೆಯ ವಿದ್ಯಾರ್ಥಿಗಳ ಪಟ್ಟಿ ತಯಾರು ಮಾಡಿದ್ದು. ಅವರಲ್ಲಿ ಸರ್ಕಾರಿ ಕೆಲಸದಲ್ಲಿರುವ ಮತ್ತು ಆರ್ಥಿಕವಾಗಿ ಅನುಕೂಲವಾಗಿರುವವರ ಇನ್ನೊಂದು ಪಟ್ಟಿಮಾಡಿದ. ಅವರಿಗೆಲ್ಲ ಪತ್ರ ಬರೆದು ವಜ್ರ ಮಹೋತ್ಸವದ ಆಚರಣೆ ಮಾಡುವ ಉದ್ದೇಶ ವಿವರಿಸಿದ. ಕಾರ್ಯಕ್ರಮಕ್ಕೆ ಉದಾರ ನೆರವು ನೀಡಬೇಕೆಂದು ಸ್ವಾಗತ ಸಮಿತಿ ಪರವಾಗಿ ವಿನಂತಿ ಮಾಡಿಕೊಂಡ. ಕಾರ್ಯಕ್ರಮದ ಡೇಟು ನಿಗದಿ ಆದ ಮೇಲೆ ಆಮಂತ್ರಣ ಕಳಿಸುತ್ತೇವೆ ಎಂದು ತಿಳಿಸಿದ. ಆಶ್ಚರ್ಯ ಎನ್ನುವಂತೆ ಬಹುತೇಕ ಹಳೇ ವಿದ್ಯಾರ್ಥಿಗಳು ಅವನ ಪತ್ರಕ್ಕೆ ಉತ್ತರಿಸಿದರು. ಎರಡೇ ತಿಂಗಳಲ್ಲಿ ಒಂದೂವರೆ ಲಕ್ಷ ರೂಗಳಷ್ಟು ಹಣ ನಗದು, ಚೆಕ್, ಡಿಡಿ ರೂಪದಲ್ಲಿ ಸ್ವಾಗತಿ ಸಮಿತಿ ಕೈಸೇರಿತು.

ಊರ ಸಮಸ್ತರಿಗೆ ಆಶ್ಚರ್ಯ ಮತ್ತು ಸಂತೋಷ. ನಮ್ಮ ಹೈಸ್ಕೂಲಿನಲ್ಲಿ ಓದಿದ ಹುಡುಗರ ಉದಾರ ಗುಣವನ್ನು ಎಲ್ಲರೂ ಮೆಚ್ಚಿಕೊಂಡರು. ಹಣ ಸಿಕ್ಕ ಮೇಲೆ ಕಾರ್ಯಕ್ರಮ ನಡೆದೀತು ಎಂಬ ವಿಶ್ವಾಸ ಎಲ್ಲರಲ್ಲೂ ಮೂಡತೊಡಗಿತು. ಸಮಯ ಸಿಕ್ಕಾಗಲೆಲ್ಲ ವಜ್ರ ಮಹೋತ್ಸವವನ್ನು ಹೇಗೆ ಆಚರಿಸಬೇಕು, ಅದಕ್ಕೆ ಎಷ್ಟು ಹಣ ಖರ್ಚಾಗಬಹುದು ಎಂಬ ಬಗ್ಗೆ ಮಾತನಾಡುತ್ತ ಎಲ್ಲರೂ ಚುರುಕಾದರು.

ಬರೀ ಕಾರ್ಯಕ್ರಮ ಮಾಡಿದರೆ ಸಾಲದು. ವಜ್ರ ಮಹೋತ್ಸವದ ನೆನಪು ಉಳಿಯುವಂತದ್ದೇನಾದರೂ ಮಾಡಬೇಕು. ಸಮಾರಂಭಕ್ಕೆ ಮುಖ್ಯಮಂತ್ರಿಯನ್ನೇ ಕರೆಸಬೇಕು. ಹೋಬಳಿಯ ಕೆರೆಗಳೆಲ್ಲ ಒಣಗಿವೆ. ಯಗಟಿ ಹೊಳೆಯಿಂದಲೊ, ಅಪ್ಪರ್ ಭದ್ರಾದಿಂದಲೋ ನೀರು ತಂದು ಅವಕ್ಕೆ ತುಂಬಿಸುವ ಹಳೆಯ ಯೋಜನೆಯನ್ನು ಜಾರಿಗೆ ತಂದು ನಮ್ಮ ಊರುಗಳನ್ನು ಉಳಿಸುವಂತೆ ಮುಖ್ಯಮಂತ್ರಿಗೆ ವಿನಂತಿ ಮಾಡಿಕೊಳ್ಳಬೇಕು. ಮುಖ್ಯಮಂತ್ರಿಗಳಿಗೆ ಹಳ್ಳಿಗಳೆಂದರೆ